# ಜಯ ಮಂಗಳಂ – ಕಂದರ್ಪನಯ್ಯನಿಗೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Note:** The wordings given in yellow highlights are also mentioned in the same above reference.

ರಾಗ: ಭೈರವಿ ತಾಳ: ಝಂಪೆ

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥

ಕಂದರ್ಪನಯ್ಯನಿಗೆ ಕರುಣಾಸಮುದ್ರನಿಗೆ
ಮಂದರೋದ್ಧರಗೆ ಮಧುಸೂದನನಿಗೆ
ಕಂದ ಪ್ರಹಲ್ಲಾದನನು ಕಾಯ್ದ ನರಸಿಂಹಗೆ
ಸೌಂದರ್ಯ ಮೂರ್ತಿ ಸರ್ವೋತ್ತಮನಿಗೆ ॥ ೧ ॥

ಕರಿರಾಜ ವರದಗೆ ಸರಸಿಜ-ಸುನಯನಗೆ
ಸುರಪತಿಯ ಮದ ಭಂಗ ಮಾಡಿದವಗೆ
ಸಿರಿಯರಸನಿಗೆ ದೈತ್ಯ ಗಿರಿ-ನಿಕರ ಕುಲಿಶನಿಗೆ
ಕರುಣಾಸಾಗರ ಶರಣ ಜನ ಪಾಲಗೆ ॥ ೨ ॥

ಅಂಬರೀಷನ ಶಾಪ ಪರಿಹರಿಸಿ ಪೊರೆದವಗೆ
ತುಂಬುರ ನಾರದ ಮುನಿ ವಂದ್ಯಗೆ (ಕಂಬುದರಗದೆ ಕಂಜ ಧನುಪಾಣಿಗೆ)
ಕಂಬು ಕಂದರ ಪುರಂದರ ವಿಠ್ಠಲ ರಾಯಗೆ (ಗೊಂಬೆಯಂದದಿ ಅಜ-ಭಾವಾದಿಗಳ ಕುಣಿಸುವಗೆ)
ಅಂಬುಜನಾಭನಿಗೆ ಅಜನ ಪಿತಗೆ ॥ ೩ ॥ (ಸ್ತಂಭ ಸನ್ನಿಹಿತ ಪುರಂದರ ವಿಠ್ಠಲಗೆ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಧು** = ಕೈಟ ಭಾಸುರನ ಅಣ್ಣ, ವಟಪತ್ರ ಶಾಯಿ ನಾರಾಯಣನ ಕರ್ಣ ಮಲದಿಂದ ಹುಟ್ಟಿದವನು

**ಸುರಪತಿಯ ........ ಮಾಡಿದವಗೆ : -** ಕೃಷ್ಣನು ನರಕಾಸುರನನ್ನು ಸೋಲಿಸಿ ಸತ್ಯಭಾಮೆ ಸಹಿತ ತಿರುಗಿ ಹೋಗುವಾಗ, ಪಾರಿಜಾತ ಪುಷ್ಪವನ್ನು ನೋಡಿದನು. ಸತ್ಯಭಾಮೆ ಅದನ್ನು ಬಯಸಿದಳು. ಕೊಡಲು ಹೇಳಿದರೆ ಇಂದ್ರನು ಅದನ್ನು ಕೊಡಲಿಲ್ಲ. ಆಗ ಶ್ರೀ ಕೃಷ್ಣನು ಅದನ್ನು ಕದ್ದೊಯ್ದನು. ಇಂದ್ರ ಮತ್ತು ಅವನ ಮಗ ಜಯಂತ ಇಬ್ಬರೂ ಇವನ ಮೇಲೆ ಯುದ್ಧಕ್ಕೆ ಬಂದು ಸೋತು ಹೋದರು.

**Classification:** Keerthane
**Ankita:** purandara vittala
**Location:** NA
**Category:** Mangala Song, Vishnu Stuti
**Sub-Category:** Vishnu, Mangala, Vishnu, karuna, Samudra, madhusudhana, asura, prahallada, Narasimha, gaja, sura, Lakshmi, parvata, sharana, jana, ambarisha, shapa, narada, muni, brahma,
**Pravachana:** NA
**Explanation:** NA